# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1113 (1367)

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ,
(ವಿಧಾನ ಸಭೆಯಿಂದಚುನಾಯಿತರಾದವರು)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 24-12-2021

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ತೋಟಗಾರಿಕೆ ಮಹಾವಿದ್ಯಾಲಯಕ್ಕೆ ರೇಷ್ಮೆ ಇಲಾಖೆಯಿಂದ 49 ಎಕರೆ 23 ಗುಂಟೆ ಜಮೀನು ನೀಡಿದ್ದು, ಅದು ಪಹಣಿಯಲ್ಲಿ ಸೇರಿಸಲಾಗಿದೆಯೇ; | ಬೀದರ್ ಜಿಲ್ಲೆಯ ತೋಟಗಾರಿಕೆ ಮಹಾವಿದ್ಯಾಲಯಕ್ಕೆ ರೇಷ್ಮೆ ಇಲಾಖೆಯ ಸರ್ವೆ ನಂ.287/1 ರಲ್ಲಿ 49 ಎಕರೆ 23 ಗುಂಟೆ ಭೂಮಿಯನ್ನು ದಿನಾಂಕ 07.01.2021 ರಂದು ಸರ್ಕಾರದಿಂದ ಮಂಜೂರು ಮಾಡಲಾಗಿರುತ್ತದೆ. ಮಂಜೂರಾದ ಜಮೀನನ್ನು ಮೋಜಣಿ ಮಾಡಿ ಸರಹದ್ದುಗಳನ್ನು ಗುರುತಿಸಿ ಹಾಗೂ ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನೀಡಲು ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯದಿಂದ ಬೀದರ್ ಜಿಲ್ಲಾಧಿಕಾರಿಯವರಗೆ ಮನವಿ ಸಲ್ಲಿಸಲಾಗಿದೆ. ಸದರಿ ಜಮೀನಿನ ಮಾಹಿತಿಯನ್ನು ಪಹಣಿಯಲ್ಲಿ ಸೇರಿಸುವ ಪ್ರಕ್ರಿಯೆಯು ಚಾಲನೆಯಲ್ಲಿದೆ. |
| ಆ) | ಹಾಗಿಲ್ಲದಿದ್ದಲ್ಲಿ, ಪಹಣಿಯಲ್ಲಿ ಸೇರಿಸುವುದು ಯಾವಾಗ; ಅದಕ್ಕಾಗಿ ವಿಶ್ವವಿದ್ಯಾಲಯದವರು ಮತ್ತು ಸರ್ಕಾರ ತೆಗೆದುಕೊಂಡ ಕ್ರಮವೇನು; | |
| ಇ) | ತೋಟಗಾರಿಕಾ ಮಹಾವಿದ್ಯಾಲಯದ ಅಭಿವೃದ್ಧಿಗಾಗಿ ಮೀಸಲಿರಿಸಿದ ಹಣವೆಷ್ಟು; ಇಲ್ಲದಿದ್ದಲ್ಲಿ ಬಿಡುಗಡೆ ಮಾಡುವುದು ಯಾವಾಗ? (ವಿವರ ನೀಡುವುದು) | ಭೂಮಿ ಅಭಿವೃದ್ಧಿ ಪಡಿಸಲು ರೂ.5.00 ಲಕ್ಷ ಬಿಡುಗಡೆ ಮಾಡಲಾಗಿರುತ್ತದೆ. ತಂತಿ ಬೇಲಿ ಹಾಕುವುದು, ಭೂಮಿ ಸೂಚಿಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. |

No.HORTI 573 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ,
ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.